ದಿ: 20.09.2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು.

ಪಾಟೀ ಸವಾಲುಃ ಶ್ರೀ. ಬಿ ಆರ್ ಹೆಚ್ ವಕೀಲರಿಂದಃ

ನಾನು ಓದಿರುವುದಿಲ್ಲ. ನಾನು ಲಕ್ಷ್ಮಿದೇವಿ ಎನ್ನುವವರ ವಿರುದ್ದ ಈ ದಾವೆಯನ್ನು ಹೂಡಿರುತ್ತೇನೆ. ನಾನು ನನ್ನ ನಿವೇಶನದ ವಿಚಾರಕ್ಕೆ ಈ ದಾವೆಯನ್ನು ಹೂಡಿರುತ್ತೇನೆ. ಸದರಿ ನಿವೇಶನ ಮೂಲತಃ ನನಗೆ ಸೇರಿದ ನಿವೇಶನವಾಗಿರುತ್ತದೆ. ಅನುಸೂಯಮ್ಮ ಎಂಬುವವರಿಂದ ನಾನು ಸದರಿ ನಿವೇಶನವನ್ನು ಕ್ರಯಕ್ಕೆ ಪಡೆದಿರುತ್ತೇನೆ. 4 ವರ್ಷಗಳ ಹಿಂದೆ ನಾನು ಸದರಿ ನಿವೇಶನವನ್ನು ಕ್ರಯಕ್ಕೆ ಪಡೆದಿರುತ್ತೇನೆ. ಸದರಿ ನಿವೇಶನವನ್ನು ಕ್ರಯಕ್ಕೆ ಪಡೆಯುವಾಗ ಅನುಸೂಯಮ್ಮನವರಿಗೆ ಹೇಗೆ ಬಂತು ಎಂಬ ಬಗ್ಗೆ ದಾಖಲಾತಿಗಳನ್ನು ಪರಿಶೀಲಿಸಿರುತ್ತೇನೆ. ಸದರಿ ಅನುಸೂಯಮ್ಮರವರು ಸದರಿ ನಿವೇಶನವನ್ನು ಬೇರೆಯವರಿಂದ ಕೊಂಡುಕೊಂಡಿರುತ್ತಾರೆ. ಅನುಸೂಯಮ್ಮರವರು ಪಾಪಣ್ಣ ಎಂಬುವವರಿಂದ ಸದರಿ ನಿವೇಶವನ್ನು ಖರೀದಿಸಿರುತ್ತಾರೆ. ಅನುಸೂಯಮ್ಮರವರು ಪಾಪಣ್ಣ ರವರಿಂದ ನಿವೇಶನವನ್ನು ಖರೀದಿಸಿದ ಬಗ್ಗೆ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

ಈ ದಾವೆಯ ಪ್ರತಿವಾದಿಯರು ಎಲ್ಲಿ ವಾಸವಾಗಿದ್ದಾರೆ ಎಂದು ನನಗೆ ಗೊತ್ತಿಲ್ಲ, ಸಾಕ್ಷಿ ಮುಂದುವರೆದು ಅವರು ನಮ್ಮ ಊರಿನವರೇ ಅಲ್ಲ ಎಂದು ನುಡಿಯುತ್ತಾರೆ. ನನ್ನ ನಿವೇಶನದ ಪಕ್ಕ ಒಂದು ಅಂಗಡಿ ಇದ್ದು ಆ ಅಂಗಡಿಯವರು ನಿಮ್ಮ ನಿವೇಶನದಲ್ಲಿ ಮೈಸೂರಿನಿಂದ ಯಾರೋ ಬಂದು ಕಲ್ಲುಗಳನ್ನು ನೆಡುತ್ತಿದ್ದಾರೆ ಎಂಬ ವಿಚಾರವನ್ನು ನನಗೆ ತಿಳಿಸಿದ್ದರ ಮೇರೆಗೆ ನಾನು ನನ್ನ ನಿವೇಶನದ ಬಳಿ ಬಂದು ವಿಚಾರಿಸಿ ಅವರ ವಿಳಾಸವನ್ನು ಅಂಗಡಿಯವರಿಂದ ಪಡೆದು ದಾವೆಯನ್ನು ಹಾಕಿರುತ್ತೇನೆ. ಸದರಿ ಪ್ರತಿವಾದಿಯರು ಮೈಸೂರಿನಿಂದ ಬಂದು ಯಾವುದೇ ಕಲ್ಲುಗಳನ್ನು ಸದರಿ ನಿವೇಶನದಲ್ಲಿ ನೆಟ್ಟಿಲ್ಲ ಎಂದರೆ ಸರಿಯಲ್ಲ. ಅಸಸ್ಮೆಂಟ್ ನಂ 4223ಃ4086 ರ ನಿವೇಶನದಲ್ಲಿ ಪ್ರತಿವಾದಿಗಳು ಸ್ವಾದೀನದಲ್ಲಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಗೆ ಮುನ್ಸಿಪಾಲ್ಟಿಯಿಂದ ಅಸಸ್ಮೆಂಟ್ ನಂ 4223ಃ4086 ರ ನಿವೇಶನವು ಮಂಜೂರಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಅಸಸ್ಮೆಂಟ್ ನಂಬರಿನ ನಿವೇಶನದ ಅಳತೆ 18 ಇಂಟು 25 ರಲ್ಲಿ ಪ್ರತಿವಾದಿಯರು ಸ್ವಾದೀನದಲ್ಲಿರುತ್ತಾರೆ, ಅದರ ಚಕ್ಕುಬಂದಿ ಪೂರ್ವಕ್ಕೆ ಃ ರಸ್ತೆಗೆ ಬಿಟ್ಟಿರುವ ಜಾಗ ಮತ್ತು ರೈಲ್ವೆ ಜಾಗ, ಪಶ್ಚಿಮಕ್ಕೆ ಃ ಲಕ್ಷ್ಮಮ್ಮರವರ ಮನೆ ನಿವೇಶನ ( ಕಲ್ಲು ಪೌಂಡೇಶನ್ ), ದಕ್ಷಿಣಕ್ಕೆ ಃ ಲಕ್ಷ್ಮಿ, ಪೌರನೌಕರರ ಮನೆ ಹಾಗೂ ಪುರಸಭೆ ರಸ್ತೆ, ಉತ್ತರಕ್ಕೆ ಃ ಉಮ್ಲಾನಾಯ್ಕ ರವರ ಮನೆ ಮತ್ತು ರೈಲ್ವೆ ಜಾಗ ಇರುತ್ತದೆ ಎಂದರೆ ಸರಿಯಲ್ಲ. ನನ್ನ ನಿವೇಶನದ ಅಸಸ್ಮೆಂಟ್ ನಂಬರ್ ನನಗೆ ಗೊತ್ತಿಲ್ಲ, ನನಗೆ ಓದಲು ಬರೆಯಲು ಬರುವುದಿಲ್ಲ.

<u>( ಮುಂದುವರೆದ ಪಾಟೀ ಸವಾಲಿಗಾಗಿ ಸಮಯಕೋರಿದ್ದರಿಂದ ಮುಂದೂಡಲಾಯಿತು )</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

ಓಃಹೇಃಕೇಃಸಃಇಃಎಃಒಃ

3 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,

ಕಡೂರು